ಸಾಕ್ಷಿಯನ್ನು ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ಸಿ ಎಂ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತೇನೆ. ಅವುಗಳ ಬಗ್ಗೆ ಮಾಹಿತಿಯನ್ನು ನಾನು ನೀಡಿರುತ್ತೇನೆ. ಅದರಲ್ಲಿ ಬರೆದ ವಿಷಯಗಳು ಸತ್ಯವಾಗಿರುತ್ತವೆ.

ನಿಪಿ-20 ನ್ನು ನಾನು ಅರ್ಜಿದಾರರಿಗೆ ಸಂಬಂಧಪಟ್ಟಂತೆ ನೀಡಿದ್ದೇನೆ. ನಿಪಿ-20 ರಲ್ಲಿ ಸಾಕ್ಷಿಯ ಸಹಿಯನ್ನು ನಿಪಿ-20(ಎ)ಎಂದು ಗುರುತಿಸಲಾಯಿತು.

ಪಾಟೀ ಸವಾಲು 2 ನೇ ಎದುರದಾರರ ಪರ ಶ್ರೀ ಹೆಚ್ ಎಸ್ ಎಸ್ ಬಿ ವಕೀಲರಿಂದಃ

ನಾನು ವಿಮ್ಸ್ ಆಸ್ಪತ್ರೆಯಲ್ಲಿ ಕಳೆದ 20 ವರ್ಷಗಳಿಂದ ವೈದ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಎ ಯೂನಿಟ್ ನಲ್ಲಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನಾನು ಅರ್ಜಿದಾರನಿಗೆ ಚಿಕಿತ್ಸೆಯನ್ನು ನೀಡಿದ್ದೇನೆ. ನನ್ನ ಬಳಿ ಅರ್ಜಿದಾರ ಬರುವುದಕ್ಕಿಂತ ಮುಂಚೆ ಆತ ವಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ. ನಿಪಿ-14 ರ ಪ್ರಕಾರ ಅರ್ಜಿದಾರನು ವಿಮ್ಸ್ ಆಸ್ಪತ್ರೆಯ ಯೂನಿಟ್ ಎ ವಿಭಾಗದಲ್ಲಿ ದಾಖಲಾಗಿದ್ದ. ನಿಪಿ-14 ರಲ್ಲಿ ಬೈಕ್‌ನಿಂದ ಬಿದ್ದು ಗಾಯಮಾಡಿಕೊಂಡ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿ. ಅರ್ಜಿದಾರನಿಗೆ ಆದ ಗಾಯಗಳು ಬೈಕ್‌ನಿಂದ ಬಿದ್ದಲ್ಲಿ ಆಗುವ ಸಾಧ್ಯತೆ ಇದೆ ಎಂದರೆ ಸರಿ. ವಿಮ್ಸ್ ಆಸ್ಪತ್ರೆಯಲ್ಲಿ ಎಲ್ಲಾ ತರಹದ ವೈದ್ಯಕೀಯ ಸೌಲಭ್ಯಗಳು ಇವೆ ಎಂದರೆ ಸರಿ. ಅರ್ಜಿದಾರನಿಗೆ ಪಿ ಎಂ ಎಸ್ ಎಸ್ ವೈ ಯೋಜನೆಯಲ್ಲಿ ಉಚಿತ ಚಿಕಿತ್ಸೆ ನೀಡಲಾಗಿತ್ತು ಎಂದರೆ ಸರಿ. ವಿಮ್ಸ್ ಆಸ್ಪತ್ರೆಯಲ್ಲಿ ಎ ಯೂನಿಟ್ ನಲ್ಲಿ ಕೆಲಸ ಮಾಡುತ್ತಿದ್ದ ವೈದ್ಯರು ಅರ್ಜಿದಾರನಿಗೆ ಆಪರೇಷನ್ ಮಾಡಿ ಚಿಕಿತ್ಸೆ ಕೊಡಬಹುದಾಗಿತ್ತು ಎಂದರೆ ಸರಿ. ಅರ್ಜಿದಾರ ಆ ರೀತಿ ಮಾಡಿಸಿಕೊಂಡಿದ್ದಲ್ಲಿ ಆತನಿಗೆ ಚಿಕಿತ್ಸಾ ವೆಚ್ಚ ಕಡಿಮೆಯಾಗುತ್ತಿತ್ತು ಎಂದರೆ ಸರಿ. ಅರ್ಜಿದಾರನಿಗೆ ನಾನೂ ಸಹ ವಿಮ್ಸ್ ಆಸ್ಪತ್ತೆಯಲ್ಲಿಯೇ ಚಿಕಿತ್ಸೆ ಕೊಡಬಹುದಾಗಿತ್ತು ಎಂದರೆ ಸರಿ. ನಾನು ಅರ್ಜಿದಾರನಿಗೆ ಮದರ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುುವಂತೆ ಸೂಚಿಸಿದ್ದೆ ಎಂದರೆ ಸರಿಯುಲ್ಲ. ಅರ್ಜಿದಾರ ನಾನು ಹೇಳಿದ್ದರಿಂದ ಮದರ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಎಂದರೆ ಸರಿಯಲ್ಲ. ಅರ್ಜಿದಾರನಿಗೆ ಆಪರೇಷನ್ ಇಲ್ಲದೇಯೇ ಚಿಕಿತ್ಸೆ ಮಾಡುವ ಸಾಧ್ಯತೆ ಇತ್ತು

ಎಂದರೆ ಸಾಕ್ಷಿಯು ಈ ಪ್ರಕರಣದಲ್ಲಿ ಗ್ಯಾಪ್ ಇದ್ದುದರಿಂದ ಆಪರೇಷನ್ ಮಾಡಲಾಗಿತ್ತು ಎಂದು ಹೇಳಿರುತ್ತಾರೆ. ಈ ಪ್ರಕರಣದಲ್ಲಿ ಅರ್ಜಿದಾರನಿಗೆ ಆದ ಗಾಯಗಳಿಂದಾಗಿ ಆತನ ದೈನಂದಿನ ಕರ್ತವ್ಯದ ಮೇಲೆ ಯಾವುದೇ ಪರಿಣಾಮ ಉಂಟುಮಾಡುವುದಿಲ್ಲ ಎಂದರೆ ಸರಿಯಲ್ಲ. ನಿಪಿ-20 ರಲ್ಲಿ ನಾನು ಕೊಟ್ಟಿರುವ ಫೈಂಡಿಂಗ್ ಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಅರ್ಜಿದಾರನಿಗೆ ಶೇಕಡಾ 30 ರಷ್ಟು ಅಂಗನ್ಯೂನ್ಯತೆ ಉಂಟಾಗಿಲ್ಲ ಎಂದರೆ ಸರಿಯಲ್ಲ. ಫಿಜಿಯೋತೆರಪಿಯಿಂದ ಅಂಗ ನ್ಯೂನ್ಯತೆ ಪ್ರಮಾಣವನ್ನು ಕಡಿಮೆಮಾಡಬಹುದು ಎಂದರೆ ಸರಿಯಲ್ಲ. ಅರ್ಜಿದಾರ ನಮ್ಮ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರಿಂದ ಆತನಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ನಿಪಿ-20 ರಂತೆ ಸುಳ್ಳು ಸರ್ಟಿಫಿಕೇಟ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸರಿ ಇದೆ.**

**1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ವಿಶೇಷ ನ್ಯಾಯಾಲಯ, ಬಳ್ಳಾರಿ.**